ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಂಗಿಯಿತು.

ಶ್ರೀ ಎಂ. ವೀರಯ್ಯಸ್ವಾಮಿ.—ನನ್ನದು ಒಂದು ಪ್ರಶ್ನೆ ಇದೆ.

ಅಧ್ಯಕ್ಷರು.—ವೀರಯ್ಯಸ್ವಾಮಿಯವರೇ, ನಾನು ನಿಮ್ಮ ಹೆಸರು ಕರೆದಾಗ ತಾವು ಗೈರುಹಾಜರಿದ್ದಿರಿ. ಈಗ ಕಾಲಾವಕಾಶ ಕೊಡುವುದಕ್ಕಾಗುವುದಿಲ್ಲ.

ಶ್ರೀ ಎಂ. ವೀರಯ್ಯ ಸ್ವಾಮಿ.—ನಾನು ರಿಕ್ವೆಸ್ಟ್ ಮಾಡಿಕೊಳ್ಳುತ್ತಿದ್ದೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು.

ಮುಖ್ಯ ಮಂತ್ರಿಗಳ ಭಾಷಣಗಳ ಪ್ರಕಟಣೆ.

೨೦೫೮. ಶ್ರೀ ಎಂ. ವೀರಯ್ಯಸ್ವಾಮಿ(ಚಿಂಚೋಳಿ).—ಮಾನ್ಯ, ವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೬ ರಿಂದ ೧೯೮೮ರ ಮಾರ್ಚ್‌ವರೆಗೆ ಸರ್ಕಾರದ ವತಿಯಿಂದ ಮುಖ್ಯಮಂತ್ರಿಗಳ ಎಷ್ಟು ಭಾಷಣಗಳನ್ನು ಹಾಗೂ ಇತರ ಲೇಖನಗಳನ್ನು ಮುದ್ರಿಸಿ ಪ್ರಕಾಶನಗೊಳಿಸಲಾಯಿತು ?

ಆ) ಪ್ರತಿಯೊಂದು ಪ್ರಕಾಶನದ ತಲೆ ಬರಹ ವಿವರವೇನು ? ಹಾಗೂ ಎಷ್ಟು ಪ್ರತಿಗಳನ್ನು ಮುದ್ರಿಸಲಾಯಿತು ?

ಇ) ಇವುಗಳಿಗೆ ತಗಲಿದ ಮುದ್ರಣ ವೆಚ್ಚವೆಷ್ಟು ?

ಶ್ರೀ ಎಂ. ಪಿ. ಪ್ರಕಾಶ್(ವಾರ್ತಾ ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಸಚಿವರು).—

ಅ) ೧೯೮೬-೮೭, ೧೯೮೭-೮೮ರಲ್ಲಿ ಮಾನ್ಯ ಮುಖ್ಯಮಂತ್ರಿಗಳ ಒಂದು ಭಾಷಣವನ್ನು ಪುಸ್ತಕ ರೂಪದಲ್ಲಿ ಹೊರತರಲಾಗಿದೆ. ಹಾಗೂ ಇತರ ಲೇಖನಗಳನ್ನು ಮುದ್ರಿಸಿರುವುದಿಲ್ಲ.

ಆ) ''ಶ್ರೀ ರಾಮಕೃಷ್ಣ ಹೆಗಡೆ, ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳ ಕೆಲವು ಆಯ್ದ ಭಾಷಣಗಳು'' ಎಂಬ ಒಂದು ಪುಸ್ತಕ. ೫೦,೦೦೦ ಪ್ರತಿಗಳನ್ನು ಮುದ್ರಿಸಲಾಯಿತು.

ಇ) ೧,೩೨,೯೬೫-೯೦ ರೂಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಎ. ಲಕ್ಷ್ಮೀಸಾಗರ್.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೋತ್ತರಗಳ ಕಿಟೀನೇ ಪಟ್ಟಿಯನ್ನು ಸಭೆಯ ಮುಂದಿಡಂತ್ತೇನೆ.

ಅಧ್ಯಕ್ಷರು.—ಪ್ರಶ್ನೋತ್ತರ ಪಟ್ಟಿಯನ್ನು ಸಭೆಯ ಮುಂದಿಡಲಾಯಿತು. ಈಗ ಗಮನ ಸೆಳೆಯುವ ಸೂಚನೆಗಳು.

ಕನ್ನಡೇತರ ಪತ್ರಿಕೆಗಳಿಗೆ ಜಾಹೀರಾತು:

೧೬೧೫. ಶ್ರೀ ಎಸ್. ಎಂ. ಅಡ್ಯಂತಾಯ(ಸುರತ್ಕಲ್).—ಮಾನ್ಯ ವಾರ್ತಾ, ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧-೧-೧೯೮೭ ರಿಂದ ೩೧-೩-೧೯೮೮ರವರೆಗೆ ರಾಜ್ಯದ ವಾರ್ತಾ ಇಲಾಖೆ ಜಾಹೀರಾತುಗಳನ್ನು ನೀಡುವುದರಲ್ಲಿ ಕನ್ನಡೇತರ ಪತ್ರಿಕೆಗಳು ಎಷ್ಟು ?

ಆ) ಮೇಲ್ಕಂಡ ಪತ್ರಿಕೆಗಳ ವಿವರ ಹಾಗೂ ನೀಡಿದ ಜಾಹೀರಾತಿನ ಮೊತ್ತವೆಷ್ಟು ?